# ಶರಣಸಂಗಮ

**ಚಿತ್ರದುರ್ಗ ಜೂ. 5:** ಕೆಲವರು ಆಸ್ತಿ, ಹಣ ಹಂಚಿಕೊಂಡರೆ ವಿಚಾರವಂತರು ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಆಸ್ತಿ ಹಂಚುವಿಕೆಯಲ್ಲಿ ಜಗಳ ಉಂಟಾಗುತ್ತದೆ. ಆದರೆ ವಿಚಾರ ಹಂಚುವಿಕೆಯಲ್ಲಿ ಜಗಳವನ್ನು ನಿವಾರಣೆ ಮಾಡುವ ಮಾರ್ಗವಿದೆ ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ನುಡಿದರು.

ನಗರದ ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ, ಶ್ರೀ ಬೃಹನ್ಮಠ ಸಂಯುಕ್ತ ಪ.ಪೂ. ಕಾಲೇಜು, ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಮಾನವಲೋಕದಲ್ಲಿ ಗಹನವಾದ ಸಮಸ್ಯೆಗಳು ಇವೆ. ಎಲ್ಲ ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಮಾಜ ಸುಧಾರಕರು ಏನೆಲ್ಲ ಪರಿವರ್ತನೆ ಉಂಟುಮಾಡಿದ್ದಾರೆ. ಹಾಗಾಗಿ ಪ್ರಜ್ಞೆ ಇರಬೇಕು. ಗುರುವಿನಲ್ಲಿ ಮತ್ತು ಶಿಷ್ಯನಲ್ಲಿ ಪ್ರಜ್ಞೆ ಇರಬೇಕು. ಗುರು ಎಂದರೆ ಪ್ರಜ್ಞೆಯ ಸಂಕೇತ. ಸೀಮಿತ ಪ್ರಜ್ಞೆಗೆ ಒಳಗಾಗಬಾರದು. ಚೌಕಟ್ಟು ಹಾಕಿಕೊಳ್ಳಬಾರದು. ಅದು ಮತೀಯ, ಜಾತಿಯ ಸಂಕುಚಿತ ಪ್ರಜ್ಞೆ ಎನ್ನಿಸಿಕೊಳ್ಳುತ್ತದೆ. ಮಾನವ ತನ್ನ ಪ್ರಯತ್ನದ ಮೂಲಕ ಅನುಭವದ ಮೂಲಕ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುತ್ತ ಹೋಗಬೇಕೆಂದರು.

ಪ್ರಜ್ಞೆಯ ಬೆಳವಣಿಗೆ ವ್ಯಕ್ತಿತ್ವದ ಬೆಳವಣಿಯಾಗಿದೆ. ಅನೇಕರಿಗೆ ತಮ್ಮ ತಲೆಯಲ್ಲಿರುವ ಮಿದುಳಿಗೆ ಅಪ್ರತಿಮ ಶಕ್ತಿ ಇದೆ ಎಂದು ತಿಳಿಯುವುದಿಲ್ಲ. ಲೌಕಿಕ ಅಥವಾ ಭೌತಿಕವಾಗಿರುವ ಪ್ರಜ್ಞೆ ಇರಬಾರದು. ಯಾರಿಗೆ ವಸ್ತುಗಳ ಮೇಲಿನ ಮೋಹ ಹೆಚ್ಚಾಗಿರುತ್ತದೋ ಅವರದು ಭೌತಿಕ ಪ್ರಜ್ಞೆ. ಭೌತಿಕ ಪ್ರಜ್ಞೆಯಿಂದ ವಿಶ್ವಪ್ರಜ್ಞೆಯ ಕಡೆಗೆ ಬರುವ ಪ್ರಯತ್ನ ಮಾಡಬೇಕು. ವಿಶ್ವಪ್ರಜ್ಞೆ ಉಳ್ಳವರು ವಿಶ್ವಗುರುವಾಗುತ್ತಾರೆ. ಜಾತಿಯ ಒಳಗಿದ್ದು ಜಾತಿ ಮೀರುವವರು ವಿಶ್ವಗುರು, ವಿಶ್ವಮಾನವರಾಗುತ್ತಾರೆ ಎಂದು ತಿಳಿಸಿದರು.

ದಾವಣಗೆರೆಯ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ. ಅನಿತಾ ದೊಡ್ಡಗೌಡರ್ ಗುರುತ್ವ - ವಿಶ್ವಮಾನವತ್ವ ಸಾಧ್ಯವೆ? ವಿಷಯ ಕುರಿತು ಮಾತನಾಡುತ್ತ, ಗುರುತ್ವ ಎಂದರೆ ಆಕರ್ಷಣಾ ಮೌಲ್ಯ. ಮಾನವನಿಗೆ ಗುರುತ್ವ ಬೇಕು. ಅದು ಮಾನವೀಯ ಮೌಲ್ಯ. ಅಂತಹ ಮೌಲ್ಯ ವಿಶ್ವಮಾನವತ್ವದೆಡೆಗೆ ಕೊಂಡೊಯ್ಯುತ್ತದೆ. ಮಗು ಹುಟ್ಟಿದಾಗ ಮನೆಯಲ್ಲಿ ಜಾತಿ, ಮತ ಎಂದು ಹೇಳುತ್ತ ಅವನಲ್ಲಿ ಅಲ್ಪ ಮಾನವತ್ವವನ್ನು ತುಂಬುತ್ತೇವೆ. ಬಸವಣ್ಣನವರ ಕಳಬೇಡ, ಕೊಲಬೇಡ ವಚನದಂತೆ ನಡೆದರೆ ಮಾನವರಾಗುತ್ತೇವೆ. ಈಗ ರಾಜಕೀಯ ಕಾಲ ಮುಗಿಯುತ್ತಿದೆ. ಆಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಿದೆ. ಕಾರಣ ಮಕ್ಕಳಲ್ಲಿ ಆಧ್ಯಾತ್ಮದೆಡೆಗಿನ ಒಲವು ಕಡಿಮೆಯಾಗುತ್ತಿದ್ದು, ಅವರನ್ನು ಮತ್ತೆ ಆಧ್ಯಾತ್ಮಿಕತೆಯತ್ತ ತರುವ ಕೆಲಸವಾಗಬೇಕಿದೆ. ಕುವೆಂಪು ಅವರ ಪಂಚಸೂತ್ರಗಳು ನಮಗೆ ಮುಖ್ಯವಾಗುತ್ತವೆ ಎಂದು ಹೇಳಿದರು.

ಮತದಿಂದ ಯಾವಾಗಲು ಗುಂಪು ಕಟ್ಟುವ ಕೆಲಸವಾಗಬಾರದು. ನಮ್ಮಲ್ಲಿ ಮತಾಂಧತೆ ಜಾಸ್ತಿಯಾಗುತ್ತಿದೆ. ಯಾವ ಗ್ರಂಥವು ಪರಮಪೂಜ್ಯ ಗ್ರಂಥವಾಗಬಾರದು. ಎಲ್ಲ ಧರ್ಮ ಗ್ರಂಥಗಳು ಒಂದೇ ಆಗಿವೆ. ಮಗುವನ್ನು ಭಾಷೆ, ಧರ್ಮ, ಮತದಿಂದ ಹೊರತರಬೇಕು. ಅಂದಾಗ ಮಾತ್ರ ಅವನಲ್ಲಿ ಗುರುತ್ವ ಶಕ್ತಿ ಅನಾವರಣಗೊಳ್ಳುತ್ತದೆ. ಮಾನವನಲ್ಲಿ ಮಾನವೀಯ ಮೌಲ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗಬೇಕು. ಆಗ ಮಕ್ಕಳು ವಿಶ್ವಮಾನವರಾಗಲು ಅವಕಾಶ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯಅತಿಥಿ ಎಂ.ಎಸ್. ಬಸವರಾಜಯ್ಯ ಮಾತನಾಡಿ, ವಿಶ್ವಗುರುವೆಂದು ಬಸವಣ್ಣನವರನ್ನು ಮಾತ್ರ ಕರೆಯುತ್ತಾರೆ. ಮನುಷ್ಯ ಆಸೆಯನ್ನು ಬಿಟ್ಟಾಗ ಮನುಷ್ಯನಾಗುತ್ತಾನೆ. ಇನ್ನೊಬ್ಬನಿಗೆ ಒಳಿತಾಗಲಿ ಎಂಬ ಆಸೆ ಇರಬೇಕು. ವಿವೇಕಾನಂದರು ಆಸೆ ಇಲ್ಲದೆ ಸಮಾಜಕ್ಕಾಗಿ ದುಡಿದರು. ಹಾಗಾಗಿ ವಿಶ್ವಮಾನವರಾದರು. ಮನುಷ್ಯ ಮನೆಗೆ ಮಾರಿ ಆದರೂ ಪರವಾಗಿಲ್ಲ ಸೋಮಾರಿ ಆಗಬಾರದು ಎಂದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಶ್ರೀ ಬೃಹನ್ಮಠ ಸಂ.ಪ.ಪೂ. ಕಾಲೇಜಿನ ಪ್ರಾಚಾರ್ಯ ಎಸ್.ಷಡಾಕ್ಷರಯ್ಯ ಸ್ವಾಗತಿಸಿದರು. ರಾಜೇಶ್ ನಿರೂಪಿಸಿದರು.


ಬಸವಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಶ್ರೀ ಬೃಹನ್ಮಠ ಸಂಯುಕ್ತ ಪ.ಪೂ. ಕಾಲೇಜು, ಚಿತ್ರದುರ್ಗ
ಇವರ ಸಹಯೋಗದಲ್ಲಿ
ಶರಣ ಸಂಗಮ
ಚಿಂತನ ವಿಷಯ ಚಿಂತನ ವಿಷಯ : ಗುರುತ್ವ – ವಿಶ್ವಮಾನವತ್ವ ಸಾಧ್ಯವೆ?
ದಿನಾಂಕ : 05–06–2022
ಸಮಯ : ಸಂಜೆ 6.30 ಸ್ಥಳ : ಅನುಭವ ಮಂಟಪ


ಬಸವಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಶ್ರೀ ಬೃಹನ್ಮಠ ಸಂಯುಕ್ತ ಪ.ಪೂ. ಕಾಲೇಜು, ಚಿತ್ರದುರ್ಗ
ಶರಣ ಸಂಗಮ
ದಿನಾಂಕ : 05–06–2022 ಭಾನುವಾರ


ಬಸವಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಶ್ರೀ ಬೃಹನ್ಮಠ ಸಂಯುಕ್ತ ಪ.ಪೂ. ಕಾಲೇಜು, ಚಿತ್ರದುರ್ಗ
ಇವರ ಸಹಯೋಗದಲ್ಲಿ
ಸಂಗಮ
ವಿಷಯ : ಗುರುತ್ವ – ವಿಶ್ವಮಾನವತ್ವ ಸಾಧ್ಯವೆ?
ಸಮಯ : ಸಂಜೆ 6.30 ಸ್ಥಳ : ಅನುಭವ ಮಂಟಪ